ಒಳ್ಳೆಯ ಸಲಹೆಗಳನ್ನು ಕೊಡುವುದಕ್ಕೆ ನಾವು ಸಹ ಒಂದು ಅವಕಾಶವನ್ನು ಕೇಳಿದ್ದೇವೆ. ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು: ಶುಕ್ರವಾರ ಇಲ್ಲವೆ ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ: ಸರ್, ನಾಳೆ ಅಜೆಂಡಾದಲ್ಲಿ ಎಷ್ಟು ವಿಷಯಗಳಿವೆ, ಇದಕ್ಕೆ reply ಇದೆ, JD(S) ರವರದು No Confidence Motion ಇದೆ, ಇಷ್ಟು ಇದೆ? ಶುಕ್ರವಾರ ಬೆಳಿಗ್ಗೆ ಮೊದಲು ಬಿಲ್ ತೆಗೆದುಕೊಳ್ಳಿ.

ಅಧ್ಯಕ್ಷರು: ಆಯಿತು, ಶುಕ್ರವಾರ ಮೊದಲು ಬಿಲ್ ತೆಗೆದುಕೊಳ್ಳೋಣ, ಈಗ ಗಮನ ಸೆಳೆಯುವ ಸೂಚನೆಗಳು.

7. ಗಮನ ಸೆಳೆಯುವ ಸೂಚನೆಗಳು

ವಿಷಯ: ಪಾವಗಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸೋಲಾರ್ ಪಾರ್ಕ್ ನಿರ್ಮಿಸುವ ಯೋಜನೆ ನಂಬಂಧವಾಗಿ ಈ ಯೋಜನೆ ರೂಪುರೇಷೆಗಳ ಬಗ್ಗೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಮಾನ್ಯ ಅಧ್ಯಕ್ಷರೆ, ಪಾವಗಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸೋಲಾರ್ ಪಾರ್ಕ್ ನಿರ್ಮಿಸುವ ಯೋಜನೆ ಸಂಬಂಧವಾಗಿ ಈ ಯೋಜನೆ ರೂಪುರೇಷೆಗಳ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಸೌರ ವಿದ್ಯುತ್ ಪಾರ್ಕ್‌ಗಳನ್ನು ಸ್ಥಾಪಿಸಲು ರೂ. 500 ಕೋಟಿಗಳನ್ನು ಆರ್ಥಿಕ ವರ್ಷ 2014–15ರಲ್ಲಿ ಮೀಸಲಿರಿಸಿರುವುದಾಗಿ ಮತ್ತು ಸೋಲಾರ್ ಪಾರ್ಕ್‌ಗಳನ್ನು ಸ್ಥಾಪಿಸಲು ಡಿ.ಪಿ.ಆರ್ ತಯಾರಿಸಲು ಪ್ರತಿ ಪಾರ್ಕಿಗೆ ರೂ. 25 ಲಕ್ಷ ಬಿಡುಗಡೆ ಮಾಡಲಾಗುತ್ತದೆ ಎಂದು ನಿರ್ದೇಶಕರು, ಎಂ.ಎನ್.ಆರ್.ಇ ರವರ ಪತ್ರ ಸಂಖ್ಯೆ: 30/52/2014–15/NSM ದಿನಾಂಕ: 12.12.2014 ರಲ್ಲಿ ತಿಳಿಸಿರುತ್ತಾರೆ. ಇದರ ಮಾರ್ಗಸೂಚಿಗಳಂತೆ ರಾಜ್ಯದಲ್ಲಿ

ಸೌರ ವಿದ್ಯುತ್ ಪಾರ್ಕ್‌ಗಳನ್ನು ಸ್ಥಾಪಿಸಲು Joint Venture Company ಯನ್ನು ರಚಿಸಬೇಕಾಗಿರುತ್ತದೆ. ಈ JV Company ಯು ರಾಜ್ಯದಲ್ಲಿ ಸೋಲಾರ್ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ನೇಮಿತ ಪ್ರತಿನಿಧಿಯಾಗಿರುತ್ತದೆ. ಅದರನ್ವಯ ಕೇಂದ್ರ ಸರ್ಕಾರಿ ಸ್ವಾಮ್ಯದ M/s. Solar Energy Corporation of India (SECI) ಹಾಗೂ ರಾಜ್ಯದ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (KREDL) ರವರ ಜಂಟಿ ಸಂಯೋಜನೆಯೊಂದಿಗೆ, ಈಗಾಗಲೇ ದಿನಾಂಕ: 15.03.2015 ರಂದು ಮೆ॥ ಕರ್ನಾಟಕ ಸೋಲಾರ್ ಪವರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನಲ್ಲಿ Joint Venture Company ಯನ್ನು ಸ್ಥಾಪಿಸಲಾಗಿದೆ.

ಈ ಸಂಬಂಧ ಈಗಾಗಲೇ ಕ್ರೆಡಲ್ ವತಿಯಿಂದ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಗುರುತಿಸಲಾದ 11,000 ಎಕರೆ ಭೂಮಿಯಲ್ಲಿ 2000 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ಪಾರ್ಕ್ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಈ ಸಂಬಂಧ 5 ಹಳ್ಳಿಗಳಲ್ಲಿ ಭೂ ದಾಖಲೆ ಪತ್ರಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿರುತ್ತದೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಅದರಲ್ಲಿ 5 ಹಳ್ಳಿಗಳ ಭೂದಾಖಲೆಗಳ ಪರಿಶೀಲನೆ ನಡೆಯುತ್ತಿದೆ ಎಂದು ಹೇಳಿದ್ದಾರೆ. 11,000 ಎಕರೆ ಭೂಮಿಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ, ಅದನ್ನು ಯಾವ ಪ್ರದೇಶದಲ್ಲಿ, ಯಾವ ಭಾಗ ಮತ್ತು ಡಿವಿಷನ್ ಮಾಡಿದ್ದಾರೆಯೆ, ಅದೇನು ವಿಚಾರ ನಮಗೆ ಗೊತ್ತಿಲ್ಲ, ಆ ವಿಚಾರವನ್ನು ಮಾನ್ಯ ಸಚಿವರು ತಿಳಿಸಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್: ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ರೂ. 500 ಕೋಟಿ ವೆಚ್ಚದಲ್ಲಿ 200 ಮೆ.ವ್ಯಾ. ಸೋಲಾರ್ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲು ಸುಮಾರು 11,000 ಎಕರೆಯಲ್ಲಿ ಯೋಜನೆಯನ್ನು ನಾವು ಈಗಾಗಲೇ ತಯಾರು ಮಾಡಿದ್ದೇವೆ. ಇದರಲ್ಲಿ ಖಾಸಗಿಯವರದೇನೂ ಇಲ್ಲ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡು ಸೇರಿ ಇದನ್ನು ಮಾಡುತ್ತಿದ್ದೇವೆ.

ಇದಕ್ಕೆ land acquisition ಮಾಡುವುದು, ಬೇರೆ ಬೇರೆ ಕಡೆ ಜಮೀನು ಹೋಗುವುದು ಸರಿ ಇಲ್ಲವೆಂದು, ನಮ್ಮ ಖಾಸಗಿಯಾಗಿ ರೈತರ ಹತ್ತಿರ ಭೂಮಿಯನ್ನು ಬಾಡಿಗೆಗೆ ತೆಗೆದುಕೊಂಡು, ಅವರಿಗೆ ಬಾಡಿಗೆ ಕೊಟ್ಟು.

ಅಧ್ಯಕ್ಷರು: ಯಾವ ತಾಲ್ಲೂಕು, ಯಾವ ಪ್ರದೇಶದಲ್ಲಿ ಮಾಡುತ್ತಿದ್ದೀರಿ?

ಶ್ರೀ ಡಿ.ಕೆ. ಶಿವಕುಮಾರ್: ಪಾವಗಡ ತಾಲ್ಲೂಕಿನಲ್ಲಿ, ಈಗಾಗಲೇ ಲಿಸ್ಟ್ ಕೊಟ್ಟಿದ್ದೇವೆ, ಜಾಗವನ್ನೆಲ್ಲಾ ಹೇಳಿದ್ದೇವೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಲಿಸ್ಟ್ ಏನಿಲ್ಲ.

ಅಧ್ಯಕ್ಷರು: ಯಾವ ಗ್ರಾಮದಲ್ಲಿ ಎಂದು ಹೇಳಿಲ್ಲವೇ?

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಹೇಳಿಲ್ಲ.

ಅಧ್ಯಕ್ಷರು: ಮತ್ತೆ ಏನು ಹೇಳಿದ್ದಾರೆ?

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಯಾವ ಗ್ರಾಮ ಎಂದು ತೋರಿಸಿಲ್ಲ, ಸುಮ್ಮನೆ 500 ಎಕರೆ ಎಂದು ಹೇಳಿದ್ದಾರೆ, ಅದನ್ನು ಡಿವಿಷನ್ ಮಾಡುತ್ತಿದ್ದೀರಾ ಅಥವಾ ಒಂದೇ ಕಡೆ ಮಾಡುತ್ತಿದ್ದಿರಾ ಎಂದು ವಿಷಯ ಗೊತ್ತಿಲ್ಲ. ಮತ್ತು ರೈತರಿಗೆ ಕೊಡುವ ಪರಿಹಾರವೇನೆಂದು ತಿಳಿಸಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ವಿಷಯ, ಆ ತಾಲ್ಲೂಕು ಪ್ರದೇಶವನ್ನು ನಾವು ಗಮನಿಸಿದ್ದೇವೆ, ಎಲ್ಲಾ ರೈತರಿಗೆ ನಾವು announce ಮಾಡಿದ್ದೇವೆ, ಯಾರ್ಯಾರು ಅರ್ಜಿ ಕೊಡಬೇಕು, ಕೊಡುತ್ತಿದ್ದಾರೆ, ಅವರದನ್ನೆಲ್ಲಾ ಗಮನಿಸುತ್ತಿದ್ದೇವೆ, ನಿಮ್ಮದೇನಾದರೂ ಸಲಹೆ ಇದ್ದರೆ ಕೊಡಿ, ಸ್ವೀಕಾರ ಮಾಡಿ ಒಂದು ದೊಡ್ಡ ಸೋಲಾರ್ ಪಾರ್ಕ್ ಅನ್ನು ನಿಮ್ಮ ತಾಲ್ಲೂಕಿನಲ್ಲಿ ಮಾಡುತ್ತೇವೆ.

ಅಧ್ಯಕ್ಷರು: ಕೆ.ಆರ್. ರಮೇಶ್ ಕುಮಾರ್ ಇಲ್ಲ, ಎಸ್.ಎನ್ ಸುಬ್ಬಾರೆಡ್ಡಿ.

ಶ್ರೀ ಎಸ್.ಎನ್. ಸುಬ್ಬಾರೆಡ್ಡಿ: ಉತ್ತರ ಬಂದಿಲ್ಲ.